**ಇಂದು ದಿನಾಂಕ:*09.10.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ವಕೀಲರಿಂದಃ**

ನನ್ನ ತಂದೆಯ ಹೆಸರು ಈರಪ್ಪಗೌಡ ಮತ್ತು ತಾತನ ಹೆಸರು ಕರಿಗೌಡ. ನಾನು ಪಿರಿಯಾಪಟ್ಟಣದಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ವಾದಿಗಳು ಈ ಕೇಸನ್ನು ಯಾಕೆ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿಗಳ ಜಮೀನನ್ನು ನಾನು ಮಾಡುತ್ತಿದ್ದೇನೆ ಎಂದು ವಾದಿಗಳು ಕೇಸು ಹಾಕಿರುವ ಬಗ್ಗೆ ನಮ್ಮ ವಕೀಲರು ನನಗೆ ತಿಳಿಸಿದ್ದಾರೆ. ನನ್ನ ಲಿಖಿತ ಹೇಳಿಕೆಯಲ್ಲಿರುವ ವಿಷಯಗಳು ಸತ್ಯವಾಗಿವೆ. ಈ ಕೇಸಿನಲ್ಲಿ ವಾದಿಗಳು ಹಾಜರುಪಡಿಸಿರುವ ದಾಖಲೆಗಳನ್ನು ನಾನು ತಿಳಿದುಕೊಂಡಿಲ್ಲ ಮತ್ತು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಮುಮ್ಮಡಿ ಕಾವಲ್ ಕಸಬಾದ ಸ.ನಂ.1 ರಲ್ಲಿ ಸುಮಾರು 500 ಎಕರೆ ಇದೆ ಎಂದರೆ ಸರಿ. ಅದೇ ಸರ್ವೆ ನಂಬರ್ ನಲ್ಲಿ ಸರ್ಕಾರದಿಂದ ಸುಮಾರು ಜನರಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಸ.ನಂ.1/38P ರ ವಿಸ್ತೀರ್ಣ 3 ಎಕರೆಯನ್ನು ನಾನು ಜಯಮ್ಮರವರಿಂದ ಖರೀದಿಸಿದ್ದೇನೆ. ನಾನು ಖರೀದಿಸಿರುವ ಬಗ್ಗೆ ದಾಖಲೆ ಕೊಡಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಸ.ನಂ.1/42P ವಿಸ್ತೀರ್ಣ 20 ಗುಂಟೆ ಜಮೀನನ್ನು ನನ್ನ ತಂದೆಗೆ ಮಂಜೂರಾಗಿದೆ. ನಮ್ಮ ತಂದೆಗೆ ಒಟ್ಟು 7 ಜನ ಮಕ್ಕಳು. ಸ.ನಂ.1/42P ನಮಗೆ ಮಂಜೂರಾಗಿರುವ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ನನ್ನ ತಂದೆ 1975–76 ನೇ ಇಸವಿಯಲ್ಲಿ ಮೃತಪಟ್ಟಿದ್ದಾರೆ. ಸ.ನಂ.1/42P ನಾವು 7 ಜನಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಸ.ನಂ.1/60 ರಲ್ಲಿನ 2 ಎಕರೆ ನನ್ನ ಅಣ್ಣನಾದ ವೆಂಕಟಪ್ಪನವರಿಗೆ ಮಂಜೂರಾಗಿದೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸ.ನಂ.1/59 ನನ್ನ 2 ನೇ ಅಣ್ಣ ತಿಮ್ಮಪ್ಪನಿಗೆ ಮಂಜೂರಾಗಿದೆ. ಸ.ನಂ.1/59 ಮತ್ತು 1/60 ರಲ್ಲಿ ನನಗೆ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ

ಸರಿ. ಸ.ನಂ.1 ರ ಪಕ್ಕಾಪೋಡಿಯಾಗಿಲ್ಲ ಎಂದರೆ ಸರಿ. ಸ.ನಂ.1/57 ರಲ್ಲಿ ನನಗಾಗಲೀ ನನ್ನ ಕುಟುಂಬದವರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸ.ನಂ.1/57 ರಲ್ಲಿ 3 ಎಕರೆ 20 ಗುಂಟೆ ಇದೆ ಎಂದರೆ ಸರಿ. ಸ.ನಂ.1/57 ರಲ್ಲಿನ 3 ಎಕರೆ 20 ಗುಂಟೆಯನ್ನು ಶ್ರೀನಿವಾಸ ಎಂದರೆ 1 ನೇ ವಾದಿಯ ಗಂಡ ಮತ್ತು 2 ರಿಂದ 4 ನೇ ವಾದಿಗಳ ತಂದೆರವರಿಗೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ನ್ಯಾಯಾಲಯಕ್ಕೆ ನಿ.ಪಿ-1 ರಲ್ಲಿ ಗುರುತಿಸಿರುವ ದಾಖಲೆಯನ್ನು ಹಾಜರುಪಡಿಸಿದ ನಂತರ ಸಂಬಂಧಪಟ್ಟ ಇಲಾಖೆಗೆ ಹೋಗಿ ಅದರ ಬಗ್ಗೆ ವಿಚಾರಿಸಿಲ್ಲ. ದಾವಾ ಆಸ್ತಿಯ ಖಾತೆ ಮೇಲೆ ಹೇಳಿದ ಶ್ರೀನಿವಾಸ ಎಂಬುವರ ಹೆಸರಿಗೆ ಆಗಿದೆ ಎಂದರೆ ಸರಿ. ಅವರ ಹೆಸರಿಗೆ ಖಾತೆಯಾಗಿರುವುದನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನಿ.ಪಿ-3 ಸ.ನಂ.1 ಕ್ಕೆ ಸಂಬಂಧಿಸಿದ ಸ್ಕೆಚ್ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ಸ.ನಂ.1/57 ಶ್ರೀನಿವಾಸ ಎಂಬುವರಿಗೆ ಮಂಜೂರಾಗಿರುವ ಬಗ್ಗೆ ತೋರಿಸಿದ್ದಾರೆ ಎಂದರೆ ಸರಿ. ಶ್ರೀನಿವಾಸರವರ ಮರಣ ಹೊಂದಿದ ನಂತರ ನಿ.ಪಿ-5 ರ ಪ್ರಕಾರ ದಾವಾ ಆಸ್ತಿಯ ಖಾತೆ ಅವರ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿ. 1 ನೇ ವಾದಿಯ ಹೆಸರಿಗೆ ಖಾತೆ ಮಾಡಿಸಿಕೊಳ್ಳಬಹುದೆಂದು 1 ರಿಂದ 4 ನೇ ವಾದಿಗಳು ನಿ.ಪಿ-4 ರಂತೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿ.ಪಿ-6 ರಲ್ಲಿ ಪಟ್ಟಾ ಪುಸ್ತಕ ನಿ.ಪಿ-7 ರಲ್ಲಿ ಕಂದಾಯ ರಶೀದಿಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿ. ನಂತರದಲ್ಲಿ ದಾವಾ ಆಸ್ತಿಯ ಆರ್.ಟಿ.ಸಿ., ಗಳು ವಾದಿಗಳ ಜಂಟಿ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಅದಕ್ಕೂ ಮೊದಲು ದಾವಾ ಆಸ್ತಿಯ ಆರ್.ಟಿ.ಸಿ ಶ್ರೀನಿವಾಸರವರ ಹೆಸರಿನಲ್ಲಿತ್ತು ಎಂದರೆ ಸರಿ. ಆರ್ ಟಿ ಸಿಗಳಲ್ಲಿ ನಮೂದಿಸಿರುವುದು ಸರಿಯಾಗಿಲ್ಲ ಎಂದು ನಾವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

ಸ.ನಂ.1/57 ವಾದಿಗಳ ಹಕ್ಕು ಮತ್ತು ಸ್ವಾಧೀನದಲ್ಲಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಗಳೆಲ್ಲರೂ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳೆಲ್ಲರೂ ಬೆಂಗಳೂರಿನಲ್ಲಿ ವಾಸವಿದ್ದು ಇಲ್ಲಿಗೆ ಬಂದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಅವರ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಟ್ಟಾಗ ಪೊಲೀಸ್ ಠಾಣೆಗೆ ದೂರು ಕೊಟ್ಟಾಗ ನನ್ನನ್ನು ಕರೆಯಿಸಿ ಎಚ್ಚರಿಗೆ ನೀಡಿದ್ದರು ಎಂದರೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**